ದಿನಾಂಕಃ 16.12.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ

4. ಮಾತುಕತೆಯಾದ ದಿವಸದಿಂದ 8 ದಿವಸಕ್ಕೆ ಕರಾರುಪತ್ರ ಬರೆಯಬೇಕೆಂದು ಮಾತುಕತೆಯಾಯಿತು. 8 ಲಕ್ಷ ಮುಂಗಡ ಹಣ ಕೊಡುವುದು ಎಂದು ಮಾತುಕತೆಯಾಯಿತು. ನನಗೆ ಕಬ್ಬು ಮಾರಾಟದಿಂದ ಹಣ ಬಂದಿದ್ದು, ಆ ಹಣವನ್ನು ನಾನು ಕೊಟ್ಟಿರುತ್ತೇನೆ. ಆ ಕಬ್ಬಿನ ಬಿಲ್‌ಗಳು ಇದ್ದರೇ ಹಾಜರು ಪಡಿಸುತ್ತೇನೆ. ನಾನು ಕೊಟ್ಟ ಹಣದ ನೋಟುಗಳ ಮುಖಬೆಲೆ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಹಣವನ್ನು ಬ್ಯಾಂಕ್‌ನಿಂದ ತಂದು ಮನೆಯಲ್ಲಿಟ್ಟಿದ್ದೆ, ಅದನ್ನು ಕೊಟ್ಟಿದ್ದೇನೆ. ಬ್ಯಾಂಕ್ ನಿಂದ ಹಣ ತೆಗೆದುಕೊಂಡ ಬಗ್ಗೆ ರಶೀದಿಗಳನ್ನು ಕೇಳಿ ಹಾಜರು ಪಡಿಸುತ್ತೇನೆ. ಮುಂಗಡ ಹಣವನ್ನು ನಿಂಗಪ್ಪ ಕಂಬಿರವರಿಗೆ ಕೊಟ್ಟಿದ್ದೇನೆ. ಆಗ ರಾಮಯ್ಯ ವಿಭೂತಿ ಮತ್ತು ಶಿವಪ್ಪ ಕಟ್ಟಿರವರು ಇದ್ದರು. ಡಿಸೆಂಬರ್-2017 ರಂದು ಖರೀದಿ ಕರಾರುಪತ್ರವನ್ನು ಮಾಡಿದ್ದೇವೆ. ಅದಕ್ಕೆ ನಾನು ನಿಂಗಪ್ಪ ಕಂಬಿ, ರಾಮಯ್ಯ ವಿಭೂತಿ ಮತ್ತು ಶಿವಪ್ಪ ಕಟ್ಟಿರವರು ಸಹಿ ಮಾಡಿರುತ್ತಾರೆ.

5. ಖರೀದಿ ಕರಾರುಪತ್ರ ಬರೆಯಲು ನಿಂಗಪ್ಪ ಕಂಬಿರವರು ಮಾಹಿತಿ ಕೊಟ್ಟಿರುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಅಷ್ಟೊಂದು ಇಲ್ಲ, ಅಡಚನೆ ಇದೆ ಹೊಲ ಕೊಡುತ್ತೇವೆಂದು ಹೇಳಿದರು ಎನ್ನುತ್ತಾರೆ. ಅದರಲ್ಲಿ 3 ವರ್ಷಗಳ ಅವಧಿ ಬರೆಸಿದ್ದೇವೆ. ಅವರು ಹೊಲ ಬರೆದುಕೊಡಲು ಆಗುವುದಿಲ್ಲ, ಮೂರು ವರ್ಷಗಳ ನಂತರ ಬರೆದುಕೊಡುತ್ತೇವೆ ಎಂದು ಹೇಳಿದರು ಹಾಗಾಗಿ ನಿಗಧಿ ಮಾಡಿದ್ದೇವೆ. ನಿಂಗಪ್ಪರವರಿಗೆ 3 ವರ್ಷಗಳ ಆದ ತಕ್ಷಣ ಹೊಲ ಬರೆದುಕೊಡಿ ಎಂದು ಕೇಳಿದ್ದೇನೆ. ಈ ರೀತಿ ನಾನು ಕೇಳಿಲ್ಲ ಎಂದರೆ ಸರಿಯಲ್ಲ, ಅವರು ಕೇಳಿದಾಗ ಬರೆದುಕೊಡದ ಕಾರಣ 3 ನೋಟಿಸ್‌ಗಳನ್ನು ಕೊಡಿಸಿದ್ದೇನೆ. 3 ನೋಟಿಸ್ ಕೊಟ್ಟ ಮೇಲೆ, 3 ವರ್ಷಗಳಾದ ಮೇಲೆ ಈ ದಾವೆ ಸಲ್ಲಿಸಿದ್ದೇನೆ. ನಾನು ಮತ್ತು ಊರಿನ ಹಿರಯರಾದ ರಾಮಯ್ಯ ವಿಭೂತಿರವರು ಸೇರಿ ನಿಂಗಪ್ಪರವರನ್ನು ಹೊಲ ಬರೆದುಕೊಡಲು ಕೇಳಲು ಅವರ ಮನೆಗೆ

ಹೋಗಿದ್ದೆವು. ಮೂರು ವರ್ಷ ಮುಗಿದ ಕೂಡಲೇ ಅವರ ಮನೆಗೆ ಹೋಗಿದ್ದೆವು. ನಿಂಗಪ್ಪರವರು ನನಗೆ ಖರೀದಿ ಕರಾರುಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

6. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಿಂಗಪ್ಪರವರಿಗೆ ಅಡಚನೆ ಇದ್ದು, ಅವರು ನಿಮ್ಮ ಬಳಿ ಸಾಲ ಕೇಳಲು ಬಂದಿದ್ದರು ಎಂದರೆ ಸಾಕ್ಷಿ ಸರಿಯಲ್ಲ. ಅಡಚನೆ ಇದೆ ಹೊಲ ಬರೆದುಕೊಡುತ್ತೇನೆ ಎಂದು ಕೇಳಿದರು. ನಿಂಗಪ್ಪ ನನ್ನ ಬಳಿ ಸಾಲ ತೆಗೆದುಕೊಂಡಿದ್ದು, ಅದರ ಭದ್ರತೆಗಾಗಿ ಕರಾರುಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಭದ್ರತೆಗಾಗಿ ಕರಾರುಪತ್ರ ಬರೆದುಕೊಟ್ಟರೆ ಮಾತ್ರ ಹಣ ಕೊಡುತ್ತೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಲ ಕೊಟ್ಟಾಗ ನಿಂಗಪ್ಪ ಅದರ ಭದ್ರತೆಗಾಗಿ ಹಿರಿಯರ ಸಮಕ್ಷಮ ಕರಾರುಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದ ಸಾಲದ ಹಣವನ್ನು ನಿಂಗಪ್ಪರವರು ನನಗೆ ಹಿಂದಿರುಗಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನಾನು ಸದರಿ ಭದ್ರತೆಗಾಗಿ ಬರೆದುಕೊಂಡ ಕರಾರುಪತ್ರವನ್ನು ರದ್ದು ಮಾಡಿಕೊಡಿ ಎಂದು ನಿಂಗಪ್ಪರವರು ಕೇಳಿದ್ದು, ನಾನು ಅದನ್ನು ಮುಂದೂಡುತ್ತಾ ಹೋದೆ ಎಂದರೆ ಸರಿಯಲ್ಲ.

7. ಇದೇ ರೀತಿ ನಾನು ಬಗರನಾಳ್ ಗ್ರಾಮದ ರಾಮಪ್ಪ ಅವದಿರವರ ಬಳಿಯೂ ಸಹ ಸಾಲದ ಭದ್ರತೆಗಾಗಿ ಕರಾರುಪತ್ರವನ್ನು ಮಾಡಿಕೊಂಡಿದ್ದೇನೆ ಎಂಬುವುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದು 2012 ರಲ್ಲಿ ಆಗಿತ್ತು, ಅವರು ನನಗೆ ಹೊಲ ಮಾಡಿಕೊಟ್ಟಿದ್ದಾರೆ. ನಿಂಗಪ್ಪರವರು ಜಮೀನನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ನಾನು ಸುಳ್ಳು ಕ್ರಯದ ಕರಾರುಪತ್ರವನ್ನು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಂಗಪ್ಪ ನನ್ನ ಬಳಿ ಸಾಲ ತೆಗೆದುಕೊಂಡಿದ್ದು, ಅದರ ಭದ್ರತೆಗಾಗಿ ಕರಾರುಪತ್ರ ಬರೆದುಕೊಟ್ಟಿದ್ದು, ಆದರೆ ಜಮೀನು ಮಾರಾಟ ಮಾಡಲು ಯಾವುದೇ ಕರಾರುಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿ. 8 ಲಕ್ಷ ಮುಂಗಡ ಹಣ ಕೊಟ್ಟಿದ್ದೇನೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಕೊಟ್ಟಿದ್ದೇನೆ ಎಂದು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಸುಳ್ಳಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಕರಾರುಪತ್ರ ಸೃಷ್ಟಿಮಾಡಿ, ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ